<u>ಸಾಕ್ಷಿಯನ್ನು ದಿ: 20.07.2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು</u>

<u>ಮುಖ್ಯ ವಿಚಾರಣೆ ಪ್ರತಿವಾದಿ ಪರ ವಕೀಲರಿಂದ:</u>

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರಿಕೆಯ ಮೂಲಕ ಹಾಕಿರುತ್ತೇನೆ. ಸದರಿ ಪ್ರಮಾಣಪತ್ರದಲ್ಲಿರುವ ಎಲ್ಲಾ ಅಂಶಗಳು ನನಗೆ ಗೊತ್ತು ಹಾಗೂ ಸದರಿ ವಿಚಾರಗಳು ಸತ್ಯವಾಗಿರುತ್ತದೆ.

ನಿಡಿ-30 ರಲ್ಲಿನ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರ್ತಿಸಿದ್ದು ಅದನ್ನು ನಿಡಿ-30(ಸಿ) ಎಂದು ಗುರುತಿಸಲಾಯಿತು. ಸದರಿ ಪತ್ರಕ್ಕೆ ಮಾರಾಟಗಾರರು ಮತ್ತು ಖರೀದಿ ದಾರರು ಸಹಿ ಮಾಡಿರುತ್ತಾರೆ.

<u>ಪಾಟೀಸವಾಲು ವಾದಿ ಪರ ಶ್ರೀ ಕೆ ಪಿ ಎಂ ವಕೀಲರಿಂದ:</u>

ನಾನು 2003 ರಿಂದ ವಕೀಲರಾಗಿ ಕೆಲಸ ಮಾಡುತ್ತಿದ್ದೇನೆ. ಈ ಪ್ರಕರಣದಲ್ಲಿ 1 ತಿಂಗಳ ಹಿಂದೆ ಸಾಕ್ಷಿ ನುಡಿಯಲು ಸಮನ್ಸ ಬಂದಿರುತ್ತದೆ. ಸದರಿ ದಿನದಂದು ನ್ಯಾಯಾಲಯಕ್ಕೆ ಹಾಜರಾಗಿ ಇನ್ನೊಂದು ದಿನಾಂಕ ಹೇಳಿರುತ್ತೇನೆ. ಆ ದಿನದಂದು ಸಾಕ್ಷಿ ನುಡಿಯಲು ನನಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು 2004 ರ ದಾಖಲಾತಿಯಾದ್ದರಿಂದ ನೋಡಿ ಕೊಳ್ಳಬೇಕಾಗಿದ್ದರಿಂದ ಸಮಯ ಕೋರಿರುತ್ತೇನೆ. ಸಮನ್ಸ್ ಅನ್ನು ನ್ಯಾಯಾಲಯದ ಜಾರಿಕಾರರು ನೀಡಿರುತ್ತಾರೆ.

ವಾದಿಯನ್ನು ನಾನು ನೋಡಿರುವ ಬಗ್ಗೆ ನೆನಪಿಲ್ಲ. ಆ ದಿನದಂದು ವಿನೋದ್ ಮತ್ತು ಮಂಜುಳ ರವರ ಗಂಡ ಬಂದಿದ್ದರು. ಸದರಿಯವರು ಆ ದಿನದಂದು ಬಾರದೇ ಇದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಕರಾರುಪತ್ರ ತಯಾರಿಸುವ ಪೂರ್ವದಲ್ಲಿ ಕ್ರಯಪತ್ರದ ನಕಲನ್ನು ನೀಡಿರುತ್ತಾರೆ. ಕರಾರುಪತ್ರಕ್ಕೆ ವಿವರಗಳನ್ನು ಮಂಜುಳ ರವರು ನೀಡಿರುತ್ತಾರೆ. ಕರಾರು ಪತ್ರದ ಮೂಲಕ ಸ್ವಾಧೀನ ಕೊಡುವ ಬಗ್ಗೆ ಮಾತುಕತೆ ಆಗಿರುವುದಿಲ್ಲ. ಸಾಕ್ಷಿಯು ಮುಂದುವರೆದು ಕ್ರಯಪತ್ರದ ಸಮಯದಲ್ಲಿ ನೀಡುವುದಾಗಿ ಮಾತುಕತೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಕರಾರುಪತ್ರದ ಸಮಯದಲ್ಲಿ ಮೂಲ ದಾಖಲಾತಿಗಳನ್ನು ಕ್ರಯಪತ್ರದ ಸಮಯದಲ್ಲಿ ನೀಡುವ ಬಗ್ಗೆ ನಮೂದಿಸಲಾಗಿರುತ್ತದೆ.

ವಿನೋದ್ ಕುಮಾರ್ ರವರ ಅಂಗಡಿ ಸ್ಟೇಷನ್ ರಸ್ತೆಯಲ್ಲಿ ಇರುತ್ತದೆ. ಪೆಟ್ರೋಲ್ ಬಂಕ್ ನಂತರದಲ್ಲಿರುತ್ತದೆ. ಮಾರಾಟಗಾರರ ದಾಖಲಾತಿಗಳಲ್ಲಿ ಯಾವುದೇ

ನ್ಯೂನತೆ ಇರುವ ಬಗ್ಗೆ ನಾನು ನೋಡಿರುವುದಿಲ್ಲ. ಕರಾರು ಪತ್ರ ಆಗುವ ಸಮಯದಲ್ಲಿ ಕ್ರಯಪತ್ರವನ್ನೇ ನೋಂದಣಿ ಮಾಡಿಸಿಕೊಳ್ಳಲು ಯಾವುದೇ ಸಮಸ್ಯೆ ಇರಲಿಲ್ಲ ಎಂದರೆ ಸಾಕ್ಷಿಯು ಕ್ರಯಪತ್ರ ಸರಿಯಾಗಿತ್ತು, ಉಳಿದ ದಾಖಲಾತಿಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ದಿನ ನನಗೆ ಕ್ರಯಪತ್ರದ ನಕಲನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿ ನೀಡಿರುವುದಿಲ್ಲ. ನಿಡಿ-30 ಆದ ಸಮಯದಲ್ಲಿ ಬಾಕಿ ಹಣ 5 ಸಾವಿರ ಇರುವುದರಿಂದ ಕ್ರಯಪತ್ರವನ್ನೇ ಮಾಡಿಕೊಳ್ಳುವಂತೆ ಹೇಳಿದಾಗ ಅವರು ದಾಖಲಾತಿಗಳಲ್ಲಿ ಸಮಸ್ಯೆಇರುವುದರಿಂದ ನೋಡಿಕೊಂಡುನಂತರ ಮಾಡಿಕೊಳ್ಳುತ್ತೇವೆಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನಿಡಿ-30 ರಲ್ಲಿ ನಮೂದಿಸಿರುವುದಿಲ್ಲ. ಮೇಲ್ಕಂಡ ವಿಚಾರವನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ. ನಿಡಿ-30 ಆದ ದಿನ ಬೆಳಿಗ್ಗೆ ಪಕ್ಷಗಾರರು ನನ್ನನ್ನು ಭೇಟಿಯಾಗಿರುತ್ತಾರೆ. ಪಕ್ಷಗಾರರು ನಿಡಿ-30 ತಯಾರಿಸುವ ಪೂರ್ವದಲ್ಲಿ ನೀಡಿದ ವಿವರಗಳ ಚೀಟಿ ನನ್ನ ಬಳಿ ಇರುವುದಿಲ್ಲ.

ನನ್ನ ಕಚೇರಿಯು ರಾ. ಪೇಟೆಯ 4 ನೇ ತಿರುವಿನಲ್ಲಿರುತ್ತದೆ. 2004 ರಲ್ಲಿ ನನ್ನ ಕಚೇರಿಯಲ್ಲಿ ಕಂಪ್ಯೂಟರ್ ಇರಲಿಲ್ಲ. ಆ ಸಮಯದಲ್ಲಿ ನ್ಯಾಯಾಲಯದ ಆವರಣದಲ್ಲಿ ಗಣಕೀಕರಣ ಮಾಡುವವರು ಇರಲಿಲ್ಲ ಎಂದರೆ ಸರಿ. ನಿಡಿ-30 ಗಣಕೀಕೃತ ದಾಖಲಾತಿ ಎಂದರೆ ಸರಿ. ನನಗೆ ಗಣಕೀಕೃತ ದಾಖಲಾತಿ ತಯಾರಿಸಲು ಬರುವುದಿಲ್ಲ. ನಿಡಿ-30 ಅನ್ನು ನಾನು ತಯಾರಿಸಿದ್ದಾಗಿ ಹೇಳಲಾಗಿದೆ ಎಂದರೆ ಸರಿ. ನಿಡಿ-30 ರಲ್ಲಿ ನಾನು ಪಕ್ಷಗಾರರಿಂದ ಮಾಹಿತಿ ಪಡೆದು ಸ್ವತಃ ತಯಾರಿಸಿದ್ದಾಗಿ ಹೇಳಲಾಗಿಲ್ಲ ಎಂದರೆ ಸರಿ. ನಿಡಿ-1, 5, 6, 29 ಮತ್ತು 30 ರಲ್ಲಿನ ಅಕ್ಷರಗಳ ಮಾದರಿ ಒಂದೇ ಇದೆ ಎಂದರೆ ಸರಿಯಲ್ಲ.

ಡಿ. ಆರ್. ಶ್ರೀನಿವಾಸ್ ಹೆಸರಿನ ವ್ಯಕ್ತಿ ಗೊತ್ತಿರುತ್ತಾರೆ. ಅವರ ವೈಯುಕ್ತಿಕ ಪರಿಚಯ ಇರುವುದಿಲ್ಲ. ನನಗೆ ಕೆ ವಿ ಪ್ರಕಾಶ್ ವಕೀಲರ ಮನೆಯ ವಿಳಾಸ ಗೊತ್ತಿರುತ್ತದೆ. ನಾನು ಅವರ ಮನೆಗೆ ಹೋಗಿ ಬರುತ್ತೇನೆಂದರೆ ಸರಿ. ಸದರಿ ವಕೀಲರ ಮನೆಯ ಮುಂಭಾಗದಲ್ಲಿಯೇ ಡಿ. ಆರ್. ಶ್ರೀನಿವಾಸ್ ರವರ ಮನೆ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸ್ವಲ್ಪ ದೂರದಲ್ಲಿದೆ ಎಂದು ನುಡಿಯುತ್ತಾರೆ. ನಿಡಿ-1, 5, 6, 29 ಮತ್ತು 30 ದಾಖಲಾತಿಗಳನ್ನು ಡಿ. ಆರ್. ಶ್ರೀನಿವಾಸ್ ರವರೇ ತಯಾರಿಸಿದ್ದಾರೆಂದರೆ ಸರಿಯಲ್ಲ. ನಿಡಿ-30 ದಾಖಲಾತಿಯನ್ನು ಪೂರ್ವ ದಿನಾಂಕ ನಮೂದಿಸಿ, ಸೃಷ್ಟಿ ಮಾಡಿ, ಸಹಿಯನ್ನು ನಕಲು ಮಾಡಿ ನಾನು ದಾಖಲಾತಿ

ತಯಾರಿಸಿದ್ದೇನೆಂದರೆ ಸರಿಯಲ್ಲ. ವಾದಿ ಮತ್ತು ಅವರ ಗಂಡ ನನ್ನ ಬಳಿ ಯಾವತ್ತೂ ಬಂದಿಲ್ಲ ಎಂದರೆ ಸರಿಯಲ್ಲ. ವಾದಿಯ ಗಂಡ ನಿಡಿ-30 ಮಾಡುವ ಸಮಯದಲ್ಲಿ ಅಲ್ಲಿಯೇ ಇದುದ್ದರಿಂದ ಅವರ ಸಹಿಯನ್ನು ಒಪ್ಪಿಗೆ ಸಾಕ್ಷಿಯಾಗಿ ಮಾಡಿಸುವಂತೆ ನಾನು ವಾದಿಗೆ ಹೇಳಿರುತ್ತೇನೆ, ಆದರೆ ಅವರ ಗಂಡ ಸಹಿ ಮಾಡಲು ಒಪ್ಪಿರುವುದಿಲ್ಲ. ಸದರಿ ವಿಚಾರವನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿರುವುದಿಲ್ಲ. ನಿಡಿ-30 ದಾಖಲಾತಿಯನ್ನು ನಾವು ಸೃಷ್ಟಿ ಮಾಡಿದ್ದರಿಂದ ಮೇಲ್ಕಂಡ ವಿಚಾರವನ್ನು ನಿಡಿ-30 ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿರುವುದಿಲ್ಲ. ವಿನಾಯಕ ಮೂರ್ತಿ ರವರನ್ನು ಆ ದಿನ ಮಾತ್ರ ನೋಡಿರುತ್ತೇನೆ. ಸದರಿ ವಿನಾಯಕ ಮೂರ್ತಿ ರವರು ರಾಜೇಶ್ ಮತ್ತು ವಿನೋದ್ ರವರ ಅಂಗಡಿಯಲ್ಲಿ ಕೆಲಸ ಮಾಡುತ್ತಾರೆಂದರೆ ನನಗೆ ಗೊತ್ತಿಲ್ಲ. ನಿಡಿ-30 ರ ಪ್ರತಿಯನ್ನು ನಿನ್ನೆ ದಿನ 3 ನೇಪ್ರತಿವಾದಿ ಪರ ವಕೀಲರು ನೀಡಿರುತ್ತಾರೆ. ವಾದಿಯು ಯಾವತ್ತೂ ಅವರ ಗಂಡನೊಂದಿಗೆ ಬಂದಿಲ್ಲ, ನಿಡಿ-30 ಕ್ಕೆ ಬರೆದುಕೊಟ್ಟು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ನಿಡಿ-30 ದಾಖಲಾತಿಯು ದಸ್ತಾವೇಜು ಹಾಳೆಯಲ್ಲಿ ಬರೆಯಲಾಗಿದೆ ಎಂದರೆ ಸರಿ. 2004 ರಲ್ಲಿ ಸ್ಟಾಂಪ್ ಪೇಪರ್ ಲಭ್ಯವಿದ್ದವು ಎಂದರೆ ಸಾಕ್ಷಿಯು ಸುಲಭವಾಗಿ ಸಿಗುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಾನು ದಸ್ತಾವೇಜು ಹಾಳೆಯಲ್ಲಿ ಮಾತ್ರ ದಾಖಲಾತಿಯನ್ನು ತಯಾರಿಸಿ ನೀಡಿರುತ್ತೇನೆ. 2004 ರಲ್ಲಿ ಸ್ಟಾಂಪ್ ಪೇಪರ್ ಗಳನ್ನು ಖರೀದಿ ಮಾಡಿದ್ದಲ್ಲಿ ದಿನಾಂಕ ಮತ್ತು ಸಮಯ ನಮೂದು ಬರುತ್ತಿದ್ದದುರಿಂದ ನಾನು ನಿಡಿ-30 ಅನ್ನು ದಸ್ತಾವೇಜು ಹಾಳೆಯಲ್ಲಿ ತಯಾರಿಸಿದ್ದೇನೆಂದರೆ ಸರಿಯಲ್ಲ. ನಿಡಿ-30 ಅನ್ನು ನಾನು, ಪ್ರತಿವಾದಿ, ವಿನೋದ್, ವಿನಾಯಕ ಮೂರ್ತಿ ರವರು ಸೇರಿಕೊಂಡು ವಾದಿಯ ಆಸ್ತಿಯನ್ನು ಹೊಡೆದುಕೊಳ್ಳುವ ಸಲುವಾಗಿ ಸೃಷ್ಟಿ ಮಾಡಿದ್ದೇವೆಂದರೆ ಸರಿಯಲ್ಲ. ಅಕ್ರಮ ಲಾಭಪಡೆಯುವ ಸಲುವಾಗಿ ದಾಖಲಾತಿಗಳನ್ನು ಸೃಷ್ಟಿಮಾಡಿ, ಪ್ರತಿವಾದಿಗೆ ಸಹಾಯಮಾಡುವ ಸಲುವಾಗಿ ಸುಳ್ಳುಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

(ಮಂಜುನಾಥ. ಆರ್)

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಅಪರ ಜೆ ಎಂ ಎಫ್ ಸಿ, ಕೆ ಜಿ ಎಫ್